ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಮೇ 15, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **State Level Workshop on Unorganised Workers : Their Aspirations, Management, Future and Law**<br>**<u>Inauguration of the Workshop:</u>**<br><br>**Hon'ble Shri Justice Tirath S. Thakur.**<br>**Judge, Supreme Court of India.**<br><br>**<u>Chief Guest</u>:**<br><br>**Justice V. Gopala Gowda, Judge, Supreme Court of India.**<br><br>**Preside :-**<br><br>**Justice D.H. Waghela, Chief Justice, High Court of Karnataka.** | **16–5–5015**<br>**Saturday**<br>**at**<br>**10-30 AM** | **Auditorium Hall, No. 1 Nimhans Convention Center, Hosur Road, Bengaluru.** |
| 2. | ಮನೆಯಂಗಳದಲ್ಲಿ ಮಾತುಕತೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ:<br><u>ತಿಂಗಳ ಅತಿಥಿ:</u> | **16–5–2015**<br>ಶನಿವಾರ<br>ಸಂಜೆ **4–00** ಗಂಟೆಗೆ | ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಂಗಳೂರು. |

| | | | |
|---|---|---|---|
| | ನಾಡೋಜ ಎಂ. ಹೆಚ್. ಕೃಷ್ಣಯ್ಯ, ಸಾಹಿತಿಗಳು | | |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

## ಗ್ರಾಮ ಪಂಚಾಯತಿ ಚುನಾವಣೆ : ಕಡ್ಡಾಯ ಮತದಾನ

**ಬೆಂಗಳೂರು, ಮೇ 15 (ಕರ್ನಾಟಕ ವಾರ್ತೆ)**

**2015 ರ ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪಂಚಾಯತ್ ಕಾಯ್ದೆಯ ಕಲಂಗೆ ತರಲಾದ ತಿದ್ದುಪಡಿಯಂತೆ ಮತ ಚಲಾಯಿಸಲು ಅರ್ಹರಿರುವ ಎಲ್ಲಾ ಮತದಾರರು ಕಡ್ಡಾಯವಾಗಿ ಮತ ಚಲಾಯಿಸಬೇಕು ಹಾಗೂ ಮತದಾರರು ಯಾವುದೇ ಅಮಿಷಕ್ಕೆ ಒಳಗಾಗದೇ ಮತ ಚಲಾಯಿಸುವಂತೆಯೂ ಮತ್ತು ರಾಜ್ಯ ಚುನಾವಣೆ ಆಯೋಗವು ನಿರ್ಧಿಷ್ಟಪಡಿಸಿರುವ ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಪ್ರಕಟಣೆಯಲ್ಲಿ ಮತದಾರರಿಗೆ ಮನವಿ ಮಾಡಿದೆ.**

**ಬಾಬು:ಜಿಪಿಆರ್.**

## ಕನ್ನಡ ಪುಸ್ತಕ ಸೂಚಿಗೆ ಮಾಹಿತಿ ನೀಡಿ

**ಬೆಂಗಳೂರು, ಮೇ 15 (ಕರ್ನಾಟಕ ವಾರ್ತೆ)**

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕಗಳ ಸೂಚಿಯೊಂದನ್ನು ಸಿದ್ದಪಡಿಸುತ್ತಿದೆ. ಕನ್ನಡ ಪುಸ್ತಕ ಪ್ರಾಧಿಕಾರವು ಹಮ್ಮಿಕೊಂಡಿರುವ ಹಲವು ಯೋಜನೆಗಳಲ್ಲಿ ಕನ್ನಡ ಪುಸ್ತಕಗಳ ಸೂಚಿಯೂ ಒಂದು ಅರ್ಜಿದಾರರು ತಾವು 2014 ರಲ್ಲಿ ಮೊದಲ ಮುದ್ರಣವಾಗಿ ಪ್ರಕಟಪಡಿಸಿದ ಪುಸ್ತಕಗಳ ತಲಾ ಒಂದು ಪ್ರತಿಯೊಂದಿಗೆ, ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

ಪ್ರಾಧಿಕಾರವು ನೇಮಿಸುವ ತಜ್ಞರು ಆಯ್ಕೆ ಮಾಡಿದ ಪುಸ್ತಕಗಳನ್ನು ಪಟ್ಟಿ ಮಾಡಿ ಸೂಕ್ತ ಸಂಕ್ಷಿಪ್ತ ಟಿಪ್ಪಣಿಯ ಪುಸ್ತಕದ ಮುಖಪುಟದೊಡನೆ ಪ್ರಾಧಿಕಾರದ ಅಂರ್ಜಾಲದಲ್ಲಿ ಪ್ರಕಟಿಸಲಾಗುವುದು. ಇದೊಂದು ದಾಖಲಾತಿ ಮಾತ್ರವಾಗಿರದೆ, ಹಲವು ಸಂಘ ಸಂಸ್ಥೆಗಳಿಗೆ ಪುಸ್ತಕಗಳ ಆಯ್ಕೆ ಖರೀದಿ, ಪುರಸ್ಕಾರಗಳಿಗೆ ಶಿಫಾರಸು ಮುಂತಾದವುಗಳಿಗೂ ಉಪಯೋಗವಾಗುವುದು. ಪುನರ್ ಮುದ್ರಣಗೊಂಡ ಪುಸ್ತಕಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಸೇರಿಸುವ ಕಾರಣದಿಂದ ಈ ಪಟ್ಟಿಯಲ್ಲಿ ಅವಕಾಶವಿರುವುದಿಲ್ಲ.

ಲೇಖಕರು ಅಥವಾ ಪ್ರಕಾಶಕರು ಪುಸ್ತಕ ಮತ್ತು ಅರ್ಜಿಯನ್ನು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇಲ್ಲಿಗೆ ಸಲ್ಲಿಸುವುದು. ಒಂದೊಮ್ಮೆ

ಪ್ರಕಾಶಕರು/ಲೇಖಕರು ತಪ್ಪು/ದೋಷಪೂರ್ಣ ಮಾಹಿತಿ ನೀಡಿ ಪುಸ್ತಕಗಳನ್ನು ಸಲ್ಲಿಸಿದ್ದು ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ಅಂಥ ಪುಸ್ತಕಗಳ ಪ್ರಕಾಶಕರನ್ನು/ಮಾಲೀಕರನ್ನು ಕಪ್ಪುಪಟ್ಟಿಗೆ ಸೇರಿಸಿ ಸರ್ಕಾರದ ಯಾವ ಸಂಸ್ಥೆಗಳಲ್ಲೂ ಪುಸ್ತಕ ಖರೀದಿಗೆ ಪರಿಗಣಿಸದಂತೆ ಪತ್ರ ಬರೆಯಲಾಗುವುದು.

ಅರ್ಜಿ ನಮೂನೆಯನ್ನು ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.com ನಲ್ಲಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15–06–2015 ಆಗಿದ್ದು, ಅನಂತರ ಬಂದ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ. ಯಾವುದೇ ಕಾರಣಕ್ಕೂ ಸಲ್ಲಿಸಲಾಗುವ ಪುಸ್ತಕಗಳನ್ನು ಪ್ರಾಧಿಕಾರವು ಹಿಂದಿರುಗಿಸುವುದಿಲ್ಲ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

**ಬಾಬು:ಜಿಪಿಆರ್.**

## ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಇಂದಿನಿಂದ ಮಾವು ಹಲಸು ಮೇಳ

**ಬೆಂಗಳೂರು, ಮೇ 15 (ಕರ್ನಾಟಕ ವಾರ್ತೆ)**

ವಿವಿಧ ತಳಿಗಳ ರುಚಿಕರ ಮಾವು ಮತ್ತು ಹಲಸಿನ ಹಣ್ಣುಗಳನ್ನು ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ದೊರಕಿಸಿಕೊಡುವ ಉದ್ದೇಶದಿಂದ ಹಾಪ್‌ಕಾಮ್ಸ್ ಸಂಸ್ಥೆಯು ಪ್ರಸಕ್ತ ಋತುಮಾನದಲ್ಲಿ ಮಾವು– ಹಲಸು ಮಾರಾಟ ಮೇಳ–2015 ಹಮ್ಮಿಕೊಂಡಿದ್ದು, ಈ ಬಾರಿ 1000ಮೆ.ಟನ್ ಮಾವು ಮತ್ತು 200 ಮೆ.ಟನ್ ಹಲಸು ವಹಿವಾಟು ನಡೆಸುವ ಗುರಿ ಹೊಂದಿದೆ ಎಂದು ಸಂಸ್ಥೆ ಆಡಳಿತಾಧಿಕಾರಿ ಪಿ.ಆರ್.ಪಳಂಗಪ್ಪ ಅವರು ತಿಳಿಸಿದರು.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ ಇಂದು ನಗರದ ಹಡ್ಸನ್ ವೃತ್ತದಲ್ಲಿನ ಹಾಪ್‌ಕಾಮ್ಸ್ ಶೀಥಲ ಗೃಹದ ಆವರಣದಲ್ಲಿ ಹಮ್ಮಿಕೊಂಡಿದ್ದ 'ಮಾವು ಮತ್ತು ಹಲಸಿನ ಮಾರಾಟ ಮೇಳ 2015'ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಾ, ಈ ಮೇಳದಿಂದ ಮಾವು ಮತ್ತು ಹಲಸು ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಸಹ ಒದಗಲಿದೆ ಎಂದರು. ಇಂದಿನಿಂದ ನಗರದ ಎಲ್ಲಾ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಮಾವು ಮತ್ತು ಹಲಸು ಮಾರಾಟ ಮೇಳ ಆರಂಭಗೊಂಡಿದ್ದು, ಆಯ್ದ ಸ್ಥಳಗಳಲ್ಲಿ ವಿಶೇಷ ಸಂಚಾರಿ ಮಾರಾಟ ವ್ಯವಸ್ಥೆ ಮಾಡಲಾಗಿದೆ ಎಂದ ಅವರು, ವಿಶೇಷವಾಗಿ ಪ್ರಸಕ್ತ ಸಾಲಿನಿಂದ ಮಳಿಗೆಗಳು ಬೆಳಿಗ್ಗೆ 6.30ಕ್ಕೆ ತೆರೆದು ಸಂಜೆ 8.30ರವರೆಗೆ ವಹಿವಾಟು ನಡೆಸಲಿದ್ದು, ಇದರಿಂದ ಗ್ರಾಹಕರಿಗೆ ಅನುಕೂಲವಾಗಲಿದೆ ಎಂದರು.

ಸಂಸ್ಥೆಯು ಕಳೆದ ಸಾಲಿನಲ್ಲಿ 269 ಲಕ್ಷ ರೂ ಮೌಲ್ಯದ 700 ಮೆ.ಟನ್‌ಗಳಷ್ಟು ಮಾವು ಮತ್ತು 5 ಲಕ್ಷ ರೂ ಮೌಲ್ಯದ 57 ಮೆ.ಟನ್ ಗಳಷ್ಟು ವಹಿವಾಟು ನಡೆಸಿದೆ ಎಂದು ಮಾಹಿತಿ ನೀಡಿದ ಅವರು, ಪ್ರತಿ ವರ್ಷ ಆಯೋಜಿಸಲಾಗುವ ಈ ಮೇಳದಿಂದ ರೈತರಿಗೆ ಬಹಳ ಅನುಕೂಲಗಳು ಆಗಲಿದೆ ಎಂದರು.

ಮಾವು ಮೇಳದಿಂದ ರೈತರ ಫಸಲಿಗೆ ಉತ್ತಮ ಧಾರಣೆ ಒದಗಿಸುವುದಲ್ಲದೆ, ಮಾವು ಕೊಯ್ಲಿನ ನಂತರ ನಷ್ಟ ತಪ್ಪಿಸಲು ಪ್ಲಾಸ್ಟಿಕ್ ಕ್ರೇಟ್ಸ್ ವ್ಯವಸ್ಥೆ ಕಲ್ಪಿಸಲಾವುದು ಮತ್ತು ಹೆಚ್ಚು ಪರಿಮಾಣದ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಿದ್ದು ಎಥಿಲಿನ್ ಬಳಸಿ ಮಾಗಿಸುವ ವಿಧಾನವನ್ನು ರೈತರಿಗೆ ಮನವರಿಕೆ ಮಾಡಲಾಗುವುದು ಎಂದರು. ಮಾವು ಮೇಳದಿಂದ ಗ್ರಾಹಕರಿಗೆ ಕಾರ್ಬೈಡ್ ರಹಿತವಾದ ಆರೋಗ್ಯಕರ ವಿವಿಧ ತಳಿಗಳ ಮಾವು ಸುಲಭ ದರದಲ್ಲಿ ದೊರೆಯಲಿದ್ದು, ಗ್ರಾಹಕರ ಅನುಕೂಲಕ್ಕೆ ತಕ್ಕಂತೆ 3 ಮತ್ತು 5 ಕೆ.ಜಿಗಳ ಕಾರ್ಟೂನ್ ಬಾಕ್ಸ್ ಗಳಲ್ಲಿ ಮಾರಾಟ ವ್ಯವಸ್ಥೆ ಸಹ ಕಲ್ಪಿಸಲಾಗಿದೆ ಎಂದರು. ಮಾವು ಮೇಳದಲ್ಲಿ ಬಾದಾಮಿ, ಸೇಂದೂರ. ರಸಪುರಿ, ಮಲಗೋವ, ಮಲ್ಲಿಕಾ, ಬಂಗನಪಲ್ಲಿ, ಕಾಲಪಾಡು, ಕೇಸರ್, ನೀಲಂ, ದಶೇರಿ, ತೋತಾಪುರಿ ಸಕ್ಕರೆ ಗುತ್ತಿ ತಳಿಯ ಮಾವುಗಳು ಗ್ರಾಹಕರಿಗೆ ಒಂದೇ ಸೂರಿನಡಿ ಲಭ್ಯವಾಗಲಿದೆ ಎಂದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕದಿರೆಗೌಡ, ಜನರಲ್ ಮ್ಯಾನೇಜರ್(ಆಡಳಿತ) ಕೇಶವ ಎಸ್.ಹೆಚ್., ಜನರಲ್ ಮ್ಯಾನೇಜನರ್ ( ಅಭಿವೃದ್ಧಿ) ದಯಾನಂದ್ ಮುಂತಾದವರು ಉಪಸ್ಥಿತರಿದ್ದರು.

ಶೇಕಡಾ 10 ರ ರಿಯಾಯಿತಿ ನಂತರ ವಿವಿಧ ಮಾವು ತಳಿಗಳ ದರದ ವಿವರ ಕ್ರಮವಾಗಿ :-

ಬಾದಾಮಿ ಪ್ರತಿ ಕೆ.ಜಿ.ಗೆ ರೂ. 93-00, 2 ಕೆ.ಜಿ.ಗೆ ಬಾಕ್ಸ್‌ಗೆ 2 ಕೆ.ಜಿಗೆ ರೂ. 186, ಬಾದಾಮಿ ಮಾವು ರೂ. 81.-00 2 ಕೆ.ಜಿ ಬಾಕ್ಸ್‌ಗೆ 162 ರೂ. ರಸಪೂರಿ ಮಾವು ರೂ 63-00, 2 ಕೆ.ಜಿ ಬಾಕ್ಸ್‌ಗೆ 126-00, ಸೆಂದೂರ ಮಾವು 36-00 ರೂ, 2 ಕೆ.ಜಿ ಬಾಕ್ಸ್‌ಗೆ ರೂ. 72-00, ಮಲಗೋವ ಮಾವು ರೂ. 83, 2 ಕೆ.ಜಿ ಬಾಕ್ಸ್‌ಗೆ 166-00 ರೂ.; ಮಲ್ಲಿಕಾ ಮಾವು ರೂ 81-00, 2 ಕೆ.ಜಿ ಬಾಕ್ಸ್‌ಗೆ 162-00 ರೂ. ಮಾವು ಬೈಗಾನ್ ಪಲ್ಲಿ ರೂ 54-00; 2 ಕೆ.ಜಿ ಬಾಕ್ಸ್‌ಗೆ 108 ರೂ; ಕಾಲಾಪಾಡು ಮಾವು ರೂ. 63-00, 2 ಕೆ.ಜಿ ಬಾಕ್ಸ್‌ಗೆ 126 ರೂ. ದಸರಿ ಮಾವು ರೂ. 79-00. 2 ಕೆ.ಜಿ ಬಾಕ್ಸ್‌ಗೆ 158-00 ರೂ; ಕೇಸರ್ ಮಾವು 57.00 ರೂ. 2 ಕೆ.ಜಿ ಬಾಕ್ಸ್‌ಗೆ 114-00 ರೂ; ಸಕ್ಕರೆ ಗುತ್ತಿ ಮಾವು ರೂ. 54-00, 2 ಕೆ.ಜಿ ಬಾಕ್ಸ್‌ಗೆ 108-00 ರೂ. ಗಳಾಗಿರುತ್ತವೆ.

ಮಮತಾ